ಕರ್ನಾಟಕ Government ಸರ್ಕಾರ of karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ

DEPARTMENT OF STATE EDUCATIONAL RESEARCH AND TRAINING

No 4, 100 FT RING ROAD, BANASHANKARI 3 RD STAGE BENGALURU - 560 085

Email: dpi.dsert-ka@nic.in Website: http://dsert.kar.nic.in

Phone - 080 26980100
Fax - 080 26422377

ಡಿಎಸ್‌ಇಆರ್‌ಟಿ DSERT

ಸಂಖ್ಯೆ:ಡಿ.ಎಸ್.ಇ.ಆರ್.ಟಿ/ಇ-ಕಂಟೆಂಟ್/ಕಂ.ಲ್ಯಾಬ್/09/2021-22 ದಿನಾಂಕ:17/01/2022

ಸುತ್ತೋಲೆ

ವಿಷಯ : ಸರ್ಕಾರಿ ಪ್ರೌಢಶಾಲೆಗಳಲ್ಲಿ ಅಳವಡಿಸಲಾಗಿರುವ ಕಂಪ್ಯೂಟರ್ ಲ್ಯಾಬ್‌ಗಳ ಬಳಕೆ ಕುರಿತು ಮಾರ್ಗಸೂಚಿಗಳು.

*****

ರಾಜ್ಯದ 2351 ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಂಪ್ಯೂಟರ್ ಲ್ಯಾಬ್‌ಗಳನ್ನು ಸ್ಥಾಪಿಸಲಾಗಿರುತ್ತದೆ. ಇದರ ಪ್ರಮುಖ ಉದ್ದೇಶ ವಿದ್ಯಾರ್ಥಿಗಳಿಗೆ ಮಾಹಿತಿ ತಂತ್ರಜ್ಞಾನದ ಪ್ರಯೋಜನಗಳನ್ನು ಬಳಸಿಕೊಂಡು ಉತ್ತಮ ಕಲಿಕಾ ಅವಕಾಶಗಳನ್ನು ಒದಗಿಸಿಕೊಡುವುದು ಮತ್ತು ವಿದ್ಯಾರ್ಥಿಗಳಿಗೆ ಅಧುನಿಕ ಜಗತ್ತಿನ ಮೂಲಕೌಶಲವಾದ ಕಂಪ್ಯೂಟರ್ ಸಾಕ್ಷರತೆಯ ಪರಿಚಯಿಸಿರುವುದು ಆಗಿರುತ್ತದೆ.

ಶಾಲೆಗಳಿಗೆ ಒದಗಿಸಲಾದ ಕಂಪ್ಯೂಟರ್‌ಗಳಿಗೆ ಈಗಾಗಲೇ ದೀಕ್ಷಾ ಪೋರ್ಟಲ್‌ನಲ್ಲಿ ಲಭ್ಯವಿರುವ 22000ಕ್ಕೂ ಅಧಿಕ ಇ-ಸಂಪನ್ಮೂಲಗಳನ್ನು ಅಳವಡಿಸಲಾಗಿದೆ. ವಿದ್ಯಾರ್ಥಿಗಳು ಇ-ಸಂಪನ್ಮೂಲಗಳನ್ನು ಸುಲಭವಾಗಿ ವೀಕ್ಷಿಸಬಹುದಾಗಿದೆ. ಇ-ಸಂಪನ್ಮೂಲಗಳಲ್ಲಿ ವೀಡಿಯೋ ಪಾಠಗಳು, ಕಲಿಕಾ ಅಭ್ಯಾಸಗಳು ಪುನರಾವರ್ತಿತ ಅಭ್ಯಾಸಗಳು ಮತ್ತು ಮೌಲ್ಯಮಾಪನ ಅಭ್ಯಾಸಗಳು ಸಹ ಒಳಗೊಂಡಿರುತ್ತವೆ. ಇ-ಸಂಪನ್ಮೂಲಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ತಮ್ಮ ಕಲಿಕೆಯ ಮಟ್ಟವನ್ನು ಉತ್ತಮಪಡಿಸಿಕೊಳ್ಳಬಹುದಾಗಿದೆ.

**ವಿದ್ಯಾರ್ಥಿ ಕಲಿಕಾ ಪಠ್ಯಕ್ರಮ** : - ಪ್ರೌಢಶಾಲಾ ವಿದ್ಯಾರ್ಥಿಗಳು ಸುಲಭವಾಗಿ ಕಂಪ್ಯೂಟರ್ ಕೌಶಲಗಳನ್ನು ಕಲಿತುಕೊಳ್ಳಲು ಎನ್.ಸಿ.ಇ.ಆರ್.ಟಿಯ ಸಿ.ಐ.ಇ.ಟಿಯು ವಿದ್ಯಾರ್ಥಿ ಕಲಿಕಾ ಪಠ್ಯಕ್ರಮವನ್ನು ರೂಪಿಸಿರುತ್ತದೆ. ಸದರಿ ಪಠ್ಯಕ್ರಮವನ್ನು ಆಫ್‌ಲೈನ್ ಮೋಡ್‌ನಲ್ಲಿ ಸದರಿ ಕಂಪ್ಯೂಟರ್‌ಗಳಿಗೆ ಅಳವಡಿಸಲಾಗಿರುತ್ತದೆ. ಶಿಕ್ಷಕರು, ವಿದ್ಯಾರ್ಥಿಗಳ ಪಠ್ಯಕ್ರಮವನ್ನು ಎನ್.ಸಿ.ಇ.ಆರ್.ಟಿಯ ವೆಬ್‌ಸೈಟ್‌ನಿಂದ ಸಹ ಪಡೆದುಕೊಳ್ಳಬಹುದಾಗಿರುತ್ತದೆ.

ಶಾಲೆಗಳಿಗೆ ಒದಗಿಸಿರುವ ಕಂಪ್ಯೂಟರ್ ಲ್ಯಾಬ್‌ಗಳ ಗರಿಷ್ಠ ಪ್ರಯೋಜನವನ್ನು ಪಡೆದುಕೊಳ್ಳಲು ಈ ಕೆಳಗಿನ ಮಾರ್ಗಸೂಚಿಗಳನ್ನು ಪಾಲಿಸತಕ್ಕದ್ದು.

- ಶಾಲೆಯಲ್ಲಿನ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ 10 ವಿದ್ಯಾರ್ಥಿಗಳ ತಂಡವನ್ನು ತರಗತಿವಾರು ರಚಿಸತಕ್ಕದ್ದು.
- ಪ್ರತಿ ತಂಡಕ್ಕೆ ವಾರದಲ್ಲಿ ಕನಿಷ್ಠ 2 ಅವಧಿಗಳನ್ನು ಕಂಪ್ಯೂಟರ್ ಲ್ಯಾಬ್‌ನಲ್ಲಿ ಕಂಪ್ಯೂಟರ್ ಕಲಿಕೆಗೆ ನಿಗಧಿಪಡಿಸಿ, ನಿಗದಿತ ದಿನಾಂಕ ಮತ್ತು ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಕಲಿಯಲು ಅವಕಾಶ ಕಲ್ಪಿಸತಕ್ಕದ್ದು.
- ವಿದ್ಯಾರ್ಥಿಗಳ ಕಂಪ್ಯೂಟರ್ ಕಲಿಕೆಗೆ ನೆರವಾಗಲು ಟ್ಯಾಲ್ಪ್ ತರಬೇತಿ ಹೊಂದಿದ ಶಿಕ್ಷಕರು ಉಪಸ್ಥಿತರಿದ್ದು, ವಿದ್ಯಾರ್ಥಿಗಳಿಗೆ ಅಗತ್ಯ ಮಾರ್ಗದರ್ಶನ ಮಾಡತಕ್ಕದ್ದು.

* ಎಸ್.ಡಿ.ಎಂ.ಸಿ ಅಥವಾ ಸಮುದಾಯ ಸಹಕಾರದೊಂದಿಗೆ ಕಂಪ್ಯೂಟರ್ ಶಿಕ್ಷಕರ ಸೇವೆಯನ್ನು ಪಡೆದುಕೊಳ್ಳಬಹುದಾಗಿದೆ.
* ಶಾಲಾ ಲಭ್ಯ ಅನುದಾನಲ್ಲಿ ಕಂಪ್ಯೂಟರ್ ಲ್ಯಾಬ್‌ಗೆ ಇಂಟರ್‌ನೆಟ್ ಸಂಪರ್ಕವನ್ನು ಪಡೆದುಕೊಳ್ಳತಕ್ಕದ್ದು.
* ಇಂಟರ್‌ನೆಟ್ ದುರ್ಬಳಕೆಯಾಗದಂತೆ ಅಗತ್ಯವಿರುವ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.
* ಪ್ರತಿದಿನ ಕಂಪ್ಯೂಟರ್ ಲ್ಯಾಬ್‌ಗಳು ಶಾಲಾ ಅವಧಿಗೆ ಒಂದು ಗಂಟೆ ಮೊದಲೇ ತೆರೆಯಬೇಕು ಮತ್ತು ಶಾಲಾ ಅವಧಿಯ ನಂತರ ಸಹ ಅಸಕ್ತ ವಿದ್ಯಾರ್ಥಿಗಳಿಗೆ ಕಲಿಕೆಗೆ ಲಭ್ಯಪಡಿಸಬೇಕು.
* ಪ್ರತಿದಿನ ಕಂಪ್ಯೂಟರ್ ಲ್ಯಾಬ್ ಅನ್ನು ಸ್ವಚ್ಚಗೊಳಿಸಿ, ತದನಂತರ ಪೀಠೋಪಕರಣಗಳನ್ನು ಸುಸಜ್ಜಿತ ರೀತಿಯಲ್ಲಿ ಇರುವುದನ್ನು ಖಾತರಿ-ಪಡಿಸಿಕೊಳ್ಳತಕ್ಕದ್ದು.
* ಪ್ರತಿ ವಾರ ಪ್ರತಿ ವಿದ್ಯಾರ್ಥಿ ಕನಿಷ್ಠ 2 ಅವಧಿಗಳನ್ನು ಕಂಪ್ಯೂಟರ್ ಲ್ಯಾಬ್‌ನ ಬಳಕೆ ಮಾಡಿರುವುದನ್ನು ಸಂಬಂಧಿಸಿದ ತರಗತಿಯ ಶಿಕ್ಷಕರು ಖಚಿತಪಡಿಸಿಕೊಳ್ಳತಕ್ಕದ್ದು.
* ಸಂಬಂಧಿಸಿದ ಶಾಲಾ ಮುಖ್ಯಸ್ಥರು ಮೇಲಿನ ಎಲ್ಲಾ ಸೂಚನೆಗಳು ಪಾಲನೆಯಾಗುತ್ತಿರುವುದನ್ನು ಪ್ರತಿ ವಾರಕ್ಕೊಮ್ಮೆ ಮೇಲುಸ್ತುವಾರಿ ಮಾಡತಕ್ಕದ್ದು.
* ಪ್ರತಿ ತಿಂಗಳು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು / ಬಿ.ಆರ್.ಸಿ/ಉಪನಿರ್ದೇಶಕರು (ಆಡಳಿತ) ಮತ್ತು (ಅಭಿವೃದ್ಧಿ) ರವರು ತಮ್ಮ ವ್ಯಾಪ್ತಿಯ ಶಾಲೆಗಳಲ್ಲಿ ಕಂಪ್ಯೂಟರ್ ಲ್ಯಾಬ್‌ಗಳ ಪರಿಣಾಮಕಾರಿಯಾಗಿ ಬಳಕೆಯಾಗುತ್ತಿರುವುದನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು ಮತ್ತು ಸಂಬಂಧಿಸಿದ ಶಾಲಾ ಮುಖ್ಯಸ್ಥರುಗಳಿಗೆ ಅಗತ್ಯ ಮಾರ್ಗದರ್ಶನ ಮಾಡುವುದು.

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ, ಬೆಂಗಳೂರು.

ಗೆ,

ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ ಅಗತ್ಯ ಕ್ರಮಕ್ಕಾಗಿ.

## ಕಂಪ್ಯೂಟರ್ ಲ್ಯಾಬ್ ಬಳಕೆಯ ವಿವರಗಳು ದಿನಾಂಕ:31/12/2021 ರಂತೆ

| ಕ್ರ.ಸಂ | ಜಿಲ್ಲೆ | ಬ್ಲಾಕ್ | ಶಾಲೆ | ಕಂಪ್ಯೂಟರ್ ಶಿಕ್ಷಣಕ್ಕೆ ಪ್ರತಿ ತರಗತಿಗೆ ಪ್ರತಿ ವಾರ ನಿಗಧಿಪಡಿಸಿದ ಅವಧಿಗಳ ಸಂಖ್ಯೆ | ವೇಳಾಪಟ್ಟಿಯಲ್ಲಿ ಕಂಪ್ಯೂಟರ್ ಶಿಕ್ಷಣಕ್ಕೆ ಅವಧಿ ನಿಗಧಿಪಡಿಸಲಾಗಿದೆಯೇ | ಇಂಟರ್‌ನೆಟ್ ಸಂಪರ್ಕ ಅಳವಡಿಸಿಕೊಳ್ಳಲಾಗಿದೆಯೇ | ವಿದ್ಯುಚ್ಛಕ್ತಿ ಶುಲ್ಕ ವೆಚ್ಚ ಮಾಸಿಕ ರೂ.ಗಳಲ್ಲಿ | ಇಂಟರ್‌ನೆಟ್ ವೆಚ್ಚ ಮಾಸಿಕ ರೂ.ಗಳಲ್ಲಿ |
|---|---|---|---|---|---|---|---|---|
| | | | | | | | | |
| | | | | | | | | |

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ, ಬೆಂಗಳೂರು.

## ಕಂಪ್ಯೂಟರ್ ಲ್ಯಾಬ್ ಬಳಕೆಯ ವಿವರಗಳು ದಿನಾಂಕ:31/12/2021 ರಂತೆ

| ಕ್ರ.ಸಂ | ಜಿಲ್ಲೆ | ಬ್ಲಾಕ್ | ಶಾಲೆ | ಕಂಪ್ಯೂಟರ್ ಶಿಕ್ಷಣಕ್ಕೆ ಪ್ರತಿ ತರಗತಿಗೆ ಪ್ರತಿ ವಾರ ನಿಗಧಿಪಡಿಸಿದ ಅವಧಿಗಳ ಸಂಖ್ಯೆ | ವೇಳಾಪಟ್ಟಿಯಲ್ಲಿ ಕಂಪ್ಯೂಟರ್ ಶಿಕ್ಷಣಕ್ಕೆ ಅವಧಿ ನಿಗಧಿಪಡಿಸಲಾಗಿದೆಯೇ | ಇಂಟರ್‌ನೆಟ್ ಸಂಪರ್ಕ ಅಳವಡಿಸಿಕೊಳ್ಳಲಾಗಿದೆಯೇ | ವಿದ್ಯುಚ್ಛಕ್ತಿ ಶುಲ್ಕ ವೆಚ್ಚ ಮಾಸಿಕ ರೂ.ಗಳಲ್ಲಿ | ಇಂಟರ್‌ನೆಟ್ ವೆಚ್ಚ ಮಾಸಿಕ ರೂ.ಗಳಲ್ಲಿ |
|---|---|---|---|---|---|---|---|---|
| | | | | | | | | |
| | | | | | | | | |

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ, ಬೆಂಗಳೂರು.